ಹೇಗೂ ಸೂಫಿ ಕಥಕ್‌ನ ಅನೇಕ ಪರಿಕಲ್ಪನೆಗಳು ನಿಮ್ಮ ಬಳಿ ಇವೆಯಲ್ಲ. ಅದನ್ನೇ ಮಾಡಿ, ನಾವು ಪ್ರಾಯೋಜಕತ್ವ ವಹಿಸಿಕೊಳ್ತೇವೆ' ಎಂದು ಹೇಳುತ್ತಿದ್ದರು. ಆದಾಗ್ಯೂ ಈ ಕ್ಷೇತ್ರದಲ್ಲಿ ನಾನು ಹಿಮ್ಮೆಟ್ಟುವವಳಲ್ಲ ಎಂದು ಸಾಬೀತು ಮಾಡಲು ಪ್ರಯತ್ನಿಸಿದೆ. ಹೀಗೆ 16 ವರ್ಷಗಳ ಸಾಂಸ್ಕೃತಿಕ ಚಳವಳಿಯ ಬಳಿಕ ಇದೀಗ ದೊಡ್ಡ ಸಂಸ್ಥೆಗಳು, ಗಣ್ಯ ವ್ಯಕ್ತಿಗಳು ನಮ್ಮ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿಕೊಳ್ಳುತ್ತಿದ್ದಾರೆ. ರಾಜನರ್ತಕಿಯರ ಕುರಿತು ಶಾಲೆ ಮತ್ತು ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ನಾನು ಅನೇಕ ಉಪನ್ಯಾಸಗಳನ್ನು ನೀಡಿದ್ದೇನೆ.

ನಮಗೆ ತಿಳಿದ ಜ್ಞಾನವನ್ನು ದಾಟಿಸುವುದಕ್ಕೆ ಉಪನ್ಯಾಸಗಳು ಒಂದು ಮಾಧ್ಯಮವೆಂದು ಆ ಕೆಲಸವನ್ನೂ ನಾನು ಮಾಡುತ್ತೇನೆ. ಆದರೆ ಒಂದು ವಿಚಾರ ಸಂಕಿರಣದಲ್ಲಿ ಪೇಪರ್ ಪ್ರೆಸೆಂಟೇಷನ್ ಮಾಡಿದಂತೆಯೇ ನಾನು ನೃತ್ಯ ಕಾರ್ಯಕ್ರಮದಲ್ಲಿ ನನ್ನ ಅಧ್ಯಯನ ಆಧಾರಿತ ವಿಷಯಗಳ ಪೇಪರ್ ಸಿದ್ಧಪಡಿಸಿ ಅದನ್ನು ನರ್ತಿಸುತ್ತೇನೆ ಎನ್ನಬಹುದು. 'I dance my paper in a programme' ಎಂದರೆ ಹೆಚ್ಚು ಸರಿ.

◆ **ಕಲಾಪ್ರಕಾರಗಳು ಸಮಾಜದಲ್ಲಿ ಪರಿವರ್ತನೆಯನ್ನು ತರಬಲ್ಲವು ಎಂದು ನೀವು ನಂಬುತ್ತೀರಾ? ಅಥವಾ ಅವು ಕೇವಲ ವೈಭವ ಮತ್ತು ರಂಜನೆಯ ಪ್ರಸ್ತುತಿಗಳಾಗಿ ಮಾಸಿ ಹೋಗುತ್ತವೆಯೇ? ನಿಮ್ಮ ಅನಿಸಿಕೆ ಏನು?**

ಶಾಸ್ತ್ರೀಯ ಕಲಾಪ್ರಕಾರಗಳು ಪರಿವರ್ತನೆಯ ಸಾಧನ ಎಂದು ನಾನು ನಂಬುತ್ತೇನೆ. ಆದ್ದರಿಂದ ಈ ಮಾಧ್ಯಮದ ಮೂಲಕ ನಾನು ಸಾಂಸ್ಕೃತಿಕ ಚಳವಳಿಯನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಾಯಿತು ಅಲ್ಲವೇ. ಇದೊಂದು ಕೇವಲ ಮನರಂಜನೆಯ ಮಾಧ್ಯಮ ಎಂದು ಸೀಮಿತಗೊಳಿಸುವುದು ಸರಿಯಲ್ಲ. ಮನರಂಜನೆಯು ಒಂದು ಭಾಗವಷ್ಟೇ. ಸೌಂದರ್ಯ, ಅಲಂಕಾರ ಎಲ್ಲವೂ ಇರಬೇಕು ನಿಜ. ಆದರೆ ಅದಕ್ಕೂ ಮೀರಿದ ಒಂದು ಉದ್ದೇಶವು ಯಾವುದೇ ಕಲಾಪ್ರಕಾರಕ್ಕೆ ಇರಲೇಬೇಕು. ನಾನು ಈ ನಿಟ್ಟಿನಲ್ಲಿ ನನ್ನ ಆಲೋಚನೆಗಳನ್ನು ಬೆಳೆಸಿ ಕೊಂಡಿದ್ದರಿಂದಲೇ ರಾಜನರ್ತಕಿಯರ ಕುರಿತು

